## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 23-11-2022

### ಬೀದರ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 57/2022 ಕಲಂ 307, 324, 504, 506 34 ಐಪಿಸಿ :-

ದಿನಾಂಕ: 22-11-2022 ರಂದು ಫಿರ್ಯಾದಿ ಶ್ರೀ ಮೊಹ್ಮದ ಮೊತೇಸಿಮ್ ಅಹ್ಮದ ತಂದೆ ಮೊಹ್ಮದ ಐಜಾಜ್ ಅಹ್ಮದ ವಯ:21 ವರ್ಷ ಜಾ:ಮುಸ್ಲಿಂ ಉ:ವಿದ್ಯಾಭ್ಯಾಸ ಸಾ: ಮಗದುಮಜಿ ಕಾಲೋನಿ ಚಿದ್ರಿ ರೋಡ, ರವರು ಬೀದರ ಗುರುನಾನಕ ಇಂಜಿನಿಯರಿಂಗ ಕಾಲೇಜದಲ್ಲಿ ಬಿ,ಇ ಅಂತಿಮ ವರ್ಷದಲ್ಲಿ ಅಭ್ಯಾಸ ಮಾಡಿಕೊಂಡಿದ್ದು ಇವರ ಕಾಕಾನಾದ ಎಂ.ಡಿ ಉಮರ್ ಅಲ್ಮಾಸ್ ತಂದೆ ಅಬ್ದುಲ್ ಗಫೂರ ವಯ:45 ವರ್ಷ ಉ:ವ್ಯಾಪಾರ ಸಾ:ನೂರ ಖಾನ ತಾಲೀಮ ಬೀದರ ಇವರ ಮದುವೆ ಸುಮಾರು 16 ವರ್ಷಗಳ ಹಿಂದೆ ಬೀದರ ನಗರದ ಗೋಲೆ ಖಾನಾ ಓಣಿಯ ಅರಸಿಯಾ ನಾಜ್ ರವರೊಂದಿಗೆ ಆಗಿದ್ದು ಅವರಿಗೆ 4 ಜನ ಮಕ್ಕಳಿದ್ದು ಗಂಡ ಹೆಂಡತಿಯವರ ಮಧ್ಯೆ ಯಾವುದೊ ವಿಷಯಕ್ಕೆ ತಕರಾರು ಆಗಿದರಿಂದ ಈಗ ಸುಮಾರು 4 ವರ್ಷಗಳ ಹಿಂದೆ ಇವರ ಚಿಕ್ಕಮ್ಮ ತನ್ನ ಮಕ್ಕಳೊಂದಿಗೆ ತವರು ಮನೆಗೆ ಹೋಗಿರುತ್ತಾಳೆ. ನಂತರ ಹಿರಿಯರು ಸುಮಾರು ಸಲ ಅವರಿಗೆ ಕರೆಯಲು ಹೋದಾಗ ಅವಳು ಬರುವುದ್ದಿಲ್ಲಾ ಅಂತ ಹೇಳಿ ತನ್ನ ತವರು ಮನೆಯಲ್ಲಿಯೆ ಇರುತ್ತಾರೆ. ನಂತರ ಆಗಾಗ ಇವರ ಚಿಕ್ಕಪ್ಪ ಎಂ.ಡಿ ಉಮರ್ ಅಲ್ಮಾಸ ರವರು ಇವರ ಚಿಕ್ಕಮನ ತಮ್ಮರಾದ ಶೋಹೇಲ್ ಮತ್ತು ಇಮ್ರಾನ ರವರಿಗೆ ನಿಮ್ಮ ಅಕ್ಕಳಿಗೆ ನಮ್ಮ ಮನೆಗೆ ಕಳುಹಿಸಿಕೊಡಿರಿ ಅಂತ ಕೇಳಿದಾಗಲ್ಲೆಲ್ಲಾ ನಮ್ಮ ಅಕ್ಕಳಿಗೆ ಕಳುಹಿಸುವುದ್ದಿಲ್ಲಾ ನಿನ್ನ ಕತೆ ಒಂದು ದಿನ ಮುಗಿಸುತ್ತೇವೆ ಅಂತ ಬೆದರಿಕೆ ಹಾಕುತ್ತಿದ್ದರು. ಹಿಗಿದ್ದು ದಿನಾಂಕ 22/11/2022 ರಂದು ಈಗ ಮಧ್ಯಾಹ್ನ 12:45 ಗಂಟೆ ಸುಮಾರಿಗೆ ಫಿರ್ಯಾದಿ ಮತ್ತು ಫಿರ್ಯಾದಿ ತಂದೆ ಇಬ್ಬರೂ ಕೂಡಿ ನಮ್ಮ ಮೊಟಾರ ಸೈಕಲ್ ನಂ ಕೆಎ-38/ಹೆಚ್-5179 ನೇದ್ದರ ಮೇಲೆ ಕುಳಿತು ರಟ್ಟೆ ಆಸ್ಪತ್ರೆ ಶಿವನಗರದಿಂದ ಅಗ್ನಿ ಶಾಮಕ ಠಾಣೆ ಮಾರ್ಗವಾಗಿ ಮನೆಗೆ ಬರುವಾಗ ನಮ್ಮನ್ನು ಹಿಂಬಾಲಿಸಿಕೊಂಡು ಒಂದು ಕಾರ ನಲ್ಲಿ ನಮ್ಮ ಹಿಂದೆ ಹಿಂದೆ ಸೊಹೇಲ್ @ ಮುಸಾ ಇವನು ಬರುತ್ತಿದ್ದನು ಮೊಟಾರ ಸೈಕಲ್ ನಿಲ್ಲಿಸಲು ಬ್ರೇಕ್ ಮಾಡಿದಾಗ ಅವನು ಕಾರ ತಂದು ಮೊಟಾರ ಸೈಕಲಗೆ ಡಿಕ್ಕಿ ಪಡಿಸಿ " ಅರೆ ಮಾಕೆ ಲೌಡೆ ಕಿದರ ಫೀರ್ರೈ ಹಮಾರೆ ಭಾನ್ ಕೋ ಛೊಡಕೆ " ಅಂತ ಅಂದವನೆ ತನ್ನ ಹತ್ತಿರ ಇದ್ದ ಚಾಕು ತೆಗೆದುಕೊಂಡು ಬೆನ್ನಲ್ಲಿ ಒಂದೆ ಸಮನೆ ಚಾಕುವಿನಿಂದ ಹೊಡೆದು ಭಾರಿ ರಕ್ತಗಾಯ ಪಡಿಸಿ ಕೊಲೆ ಮಾಡಲು ಪ್ರಯತ್ನಿಸಿರುತ್ತಾನೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 205/2022 ಕಲಂ 392 ಐಪಿಸಿ :-

ದಿನಾಂಕ 22/11/2022 ರಂದು 1430 ಗಂಟೆಗೆ ಫಿರ್ಯಾದಿ ಶ್ರೀ ಸತೀಷ ತಂದೆ ಕಾಶಿನಾಥ ಮಾಶೆಟ್ಟಿ ವಯ:38 ವರ್ಷ ಜಾತಿ: ಲಿಂಗಾಯತ ಉ:ಮೆಡಿಕಲ ರಿಪ್ರಜೆಂಟೇಟಿವ ಕೆಲಸ ಸಾ:ಶಿವನಗರ ಉತ್ತರ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ಇವರು ಒಂದು ವಿವೊ ಮೊಬೈಲನ್ನು 2020 ನೇ ಸಾಲಿನಲ್ಲಿ ಖರೀದಿಸಿದ್ದು ಅದರ ಐ.ಎಮ್.ಇ.ಐ. ಸಂಖ್ಯೆ. 8643070556175218 ಇರುತ್ತದೆ. ಆವಾಗ ಅದರಲ್ಲಿ ಸಿಮ್. ಸಂಖ್ಯೆ. 7483293637 ಇತ್ತು. ಅದರ ಅಂದಾಜು ಕಿಮ್ಮತ್ತು 15,000/- ರೂ. ಇರುತ್ತದೆ. ಹೀಗಿರುವಾಗ ದಿನಾಂಕ 21/11/2022 ರಂದು ಸಾಯಂಕಾಲ 8:30 ಪಿ.ಎಮ್. ಗಂಟೆಯ ಸಮಯಕ್ಕೆ ಶಿವನಗರ ಸಿಗ್ನಲ ಹತ್ತೀರ ನನ್ನ ಗೆಳೆಯನಾದ ಶ್ರೀ. ಫಿರೋಜ ಇವರ ಬರುವಿಕೆಗಾಗಿ ಕಾಯುತಿದ್ದು, ಅಷ್ಟರಲ್ಲಿ ಪಾಪನಾಶ ಗೇಟ ಕಡೆಯಿಂದ ಒಂದು ಬಜಾಜ ಪಲ್ಸಾರ ಎನ್.ಎಸ್.125 ಮೊಟರ ಸೈಕಲ ಮೇಲೆ ಮೂರು ಜನ ಅಪರಿಚಿತ ಕಳ್ಳರ ಬಂದು ನನ್ನ ಕೈಯಿಂದ ಮೊಬೈಲನ್ನು ಕಸಿದುಕೊಂಡು ಮಿಲಿನಿಯಂ ಶಾಲೆಯ ಕಡೆಗೆ ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

**ಹಳ್ಳಿಖೇಡ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 113/2022 ಕಲಂ 380, 454 ಐಪಿಸಿ :-**

ದಿನಾಂಕ: 22/11/2022 ರಂದು ಮುಂಜಾನೆ 11:00 ಗಂಟೆಗೆ ಫಿರ್ಯಾದಿ ಅನೀಲಕುಮಾರ ತಂದೆ ಚಂದ್ರಪ್ರಕಾಶ ಪ್ರಭಾ ವಯ: 56 ವರ್ಷ ಜಾತಿ: ಲಿಂಗಾಯತ ಉ: ಒಕ್ಕಲುತನ ಸಾ// ಹಳ್ಳಿಖೇಡ (ಬಿ) ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಂಶವೆನೆಂದರೆ, ಇವರಿಗೆ ಶಕ್ಕರಗಂಜವಾಡಿ ಗ್ರಾಮ ಶಿವಾರದಲ್ಲಿ ಹೊಲ ಇರುತ್ತದೆ. ಹೀಗಿರುವಾಗ ದಿನಾಂಕ: 21/11/2022 ರಂದು ಮಂಜಾನೆ 10:00 ಗಂಟೆ ಸುಮಾರಿಗೆ ಫಿರ್ಯಾದಿ ಮತ್ತು ಇವರ ಪತ್ನಿ ಸುನೀತಾ ಇಬ್ಬರು ಮನೆಗೆ ಬೀಗ ಹಾಕಿಕೊಂಡು ಶಕ್ಕರಗಂಜವಾಡಿ ಶಿವಾರ ಹೊಲದಲ್ಲಿ ಹೋಗಿ ತೊಗರಿ ಬೆಳೆಯಲ್ಲಿ ಸದಿ ತೆಗೆಯಲು ಹೋಗಿ ನಂತರ ಹೊಲದಲ್ಲಿ ತೊಗರಿಯಲ್ಲಿ ಸದಿ ತೆಗೆದು ಮರಳಿ ಮನೆಗೆ ಸಂಜೆ 05:30 ಗಂಟೆ ಸುಮಾರಿಗೆ ಮನೆಗೆ ಬಂದಾಗ ಮನೆಯ ಬೀಗ ಹಾಕೆ ಇದ್ದು ಬೀಗ ತೆಗೆದು ಒಳಗೆ ಹೋಗಿ ನೋಡಲು ಮನೆಯ ಹಿಂದಿನ ಬಾಗಿಲಿನ ಕೀಲಿ ಮುರಿದಿದ್ದು ಇರುವದನ್ನು ನೋಡಿ ನಾವು ಗಾಬರಿಯಾಗಿ ಮಲಗುವ ಕೋಣೆಯಲಿಯ ಅಲಮಾರಿ ನೋಡಲು ಕೀಲಿ ತೆರೆದಿದ್ದು ನೋಡಿ ಗಾಬರಿಯಾಗಿ ಅಲಮಾರಿಯಲ್ಲಿ ನಾವು ಇಟ್ಟ ಬಂಗಾರದ ಆಭರಣಗಳು ನೋಡಲು 1] 20 ಗ್ರಾಮ ಬಂಗಾರದ ಗಂಟಿನ ಸರ ಅ.ಕಿ 60000/- ರೂ, 2] 2 ಗ್ರಾಮ ಬಂಗಾರದ ಬೆಂಡೋಲಿ ಅ.ಕಿ 6000/-ರೂ, 3] 5 ಗ್ರಾಮ ಬಂಗಾರದ 2 ಮಾಟಿ ಅ.ಕಿ 15000/-ರೂ,4] 1 ಗ್ರಾಮ ಬಂಗಾರದ ಮಣಿಸರ ಅ.ಕಿ 3000/-ರೂ, 5] 2.5 ಗ್ರಾಮ ಬಂಗಾರದ ಕಿವಿಯಲ್ಲಿಯ ಎರಡು ಹೊಗಳು, 6] 1 ಗ್ರಾಮ ಬಂಗಾರದ 2 ಉಂಗೂರ ಅ.ಕಿ 3000/-,7] 1 ಗ್ರಾಮ ಬಂಗಾರದ ಮಣಿ ಅ.ಕಿ 3000/- ರೂ, ಮತ್ತು ನಗದ ಹಣ 30,500/- ರೂ. ನೇದ್ದವು ಯಾರೋ ಅಪರಿಚಿತ ಕಳ್ಳರು ಮನೆಯ ಹಿಂದಿನ ಬಾಗಿಲ ಕೀಲಿ ಮುರಿದು ಒಳಗೆ ಪ್ರವೇಶ ಮಾಡಿ ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.